# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಚುಕ್ಕೆರಹಿತ ಪ್ರಶ್ನೆ ಸಂಖ್ಯೆ | 1219 (1092) |
| ಉತ್ತರಿಸುವ ದಿನಾಂಕ | 13.03.2026 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಒಂದು ವರ್ಷದಲ್ಲಿ ಎಷ್ಟು ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ ಅಥವಾ ವೇತನ ಕಡಿತವನ್ನು ಎದುರಿಸಿದ್ದಾರೆ; | ಕಳೆದ ಒಂದು ವರ್ಷದಲ್ಲಿ ಉದ್ಯೋಗ ಕಳೆದು ಕೊಂಡ ಕಾರ್ಮಿಕರ ಸಂಖ್ಯೆ: 3665 ಹಾಗೂ ವೇತನ ಕಡಿತವನ್ನು ಎದುರಿಸಿರುವ ಕಾರ್ಮಿಕರ ಸಂಖ್ಯೆ: 418 ಆಗಿರುತ್ತದೆ. |
| ಆ) | ವಜಾ ಮತ್ತು ಮುಚ್ಚುವಿಕೆಯ ಸಮಯದಲ್ಲಿ ಕಾರ್ಮಿಕರನ್ನು ರಕ್ಷಿಸಲು ಸರ್ಕಾರ ಯಾವ ತಕ್ಷಣದ ಕ್ರಮಗಳನ್ನು ಕೈಗೊಂಡಿದೆ; | ವಜಾ/ಲೇಆಫ್ ಮಾಡುವ ಕಾರ್ಮಿಕರಿಗೆ 45 ದಿನಗಳವರೆಗೆ ಕೈಗಾರಿಕಾ ವಿವಾದಗಳ ಕಾಯ್ದೆಯ ಕಲಂ 25-ಸಿ ಪ್ರಕಾರ ಶೇಕಡಾ 50 ರಷ್ಟು ವೇತನವನ್ನು ಪಾವತಿ ಮಾಡಲಾಗುತ್ತದೆ. ಆದರೆ 45 ದಿನಗಳ ನಂತರ ವೇತನ ಪಾವತಿಸುವ ಬಗ್ಗೆ ಉಭಯತ್ರರಲ್ಲಿ ಒಪ್ಪಂದವಾಗಬೇಕು.<br>ಪೂರ್ವಾನುಮತಿ ಇಲ್ಲದೆ ವಜಾ ಮಾಡಲಾದ ಸಂದರ್ಭದಲ್ಲಿ ಕಾಯ್ದೆಯ ಕಲಂ 25-ಎಸ್ ಪ್ರಕಾರ ದಂಡ ವಿಧಿಸಲು ಅವಕಾಶವಿದ್ದು, ಆರು ತಿಂಗಳ ಕಾರಾಗೃಹ ವಾಸ ಅಥವಾ ಐದು ಸಾವಿರ ರೂ. ಗಳ ಜುಲ್ಮಾನೆ ಅಥವಾ ಎರಡನ್ನು ವಿಧಿಸಲು ಅವಕಾಶವಿರುತ್ತದೆ.<br>ಸೂಕ್ತ ಪ್ರಾಧಿಕಾರದ ಅನುಮತಿ ಪಡೆಯದೇ ಕೈಗಾರಿಕಾ ವಿವಾದಗಳ ಕಾಯ್ದೆಯಡಿ ಪ್ರಾವಧಾನಗಳನ್ನು ಉಲ್ಲಂಘಿಸಿ ಸಂಸ್ಥೆಯನ್ನು ಮುಚ್ಚಿದಲ್ಲಿ ಅಂತಹ ಸಂಸ್ಥೆಗಳ ವಿರುದ್ಧ ಕ್ರಮವಹಿಸಲು ಕಾಯ್ದೆಯಡಿ ಅವಕಾಶ ಕಲ್ಪಿಸಲಾಗಿರುತ್ತದೆ.<br>ವಜಾ ಮತ್ತು ಮುಚ್ಚುವಿಕೆಯ ಕುರಿತಂತೆ ದೂರು ಬಂದಲ್ಲಿ ಇಲಾಖೆಯಿಂದ ಕ್ರಮವಹಿಸಲಾಗುವುದು. |
| ಇ) | ಅನೇಕ ವಲಯಗಳಲ್ಲಿ ಕನಿಷ್ಠ ವೇತನವನ್ನು ಏಕೆ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿಲ್ಲ, ಹಾಗೂ ವೇತನ ಪಾವತಿ ಮಾಡದಿರುವಿಕೆ ಅಥವಾ ವಿಳಂಬ ಪಾವತಿಯ ಬಗ್ಗೆ ಎಷ್ಟು ದೂರುಗಳು ಪ್ರಸ್ತುತ ಬಾಕಿ ಉಳಿದಿವೆ; (ಮಾಹಿತಿ ನೀಡುವುದು) | ಎಲ್ಲಾ ವಲಯಗಳಲ್ಲಿ ಕನಿಷ್ಠ ವೇತನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಕಾರ್ಮಿಕ ಇಲಾಖೆಯು, ಎಲ್ಲಾ ವಲಯಗಳಲ್ಲಿ ಕನಿಷ್ಠ ವೇತನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿರುವುದನ್ನು ಖಚಿತಪಡಿಸಿಕೊಳ್ಳಲು, ಕನಿಷ್ಠ ವೇತನ ನೀಡದಿರುವ ಸಂಸ್ಥೆಗಳು ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಪಾವತಿಸದ ಕುರಿತು ದೂರುಗಳು ಸ್ವೀಕೃತವಾದಲ್ಲಿ ಹಾಗೂ ದೈನಂದಿನ ತಪಾಸಣಾ ಸಂದರ್ಭದಲ್ಲಿ ಕಂಡುಬಂದಲ್ಲಿ, ಕನಿಷ್ಠ ವೇತನ ಕಾಯ್ದೆ, 1948 ರಡಿ ಅಧಿಸೂಚಿಸಲ್ಪಟ್ಟ ನಿರೀಕ್ಷಕರು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸದರಿ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ |

ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಕ್ಲೇಮ್ ಪ್ರಾಧಿಕಾರಿಗಳು ಸೆಕ್ಷನ್ 20(1) ರಡಿ ಸದರಿ ಕ್ಲೇಮ್ ಅರ್ಜಿಗಳನ್ನು ಪರಿಶೀಲಿಸಿ, ವಿಚಾರಣೆ ನಡೆಸಿ, ನಿಯಮಾನುಸಾರ ಆದೇಶ ಹೊರಡಿಸುವ ಮೂಲಕ ವ್ಯತ್ಯಾಸದ ಕನಿಷ್ಠ ವೇತನದ ಜೊತೆಗೆ ಪರಿಹಾರವನ್ನು ಪಾವತಿಸಲು ಸಂಬಂಧಿಸಿದ ಗುತ್ತಿಗೆದಾರರು/ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗುತ್ತಿದೆ.

ಈ ಸಂಬಂಧ ಕಳೆದ ಮೂರು ವರ್ಷದ ಅವಧಿಯಲ್ಲಿ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ಪಾವತಿಸದ ಮೂಲ ಮಾಲೀಕರು/ಗುತ್ತಿಗೆದಾರರಿಗೆ ಸಂಬಂಧಿಸಿದಂತೆ ಒಟ್ಟು 41995 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.146.55 ಕೋಟಿ ಮೊತ್ತದ 8850 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಮುಂದೆ ದಾಖಲಿಸಲಾಗಿರುತ್ತದೆ. ಅದರಲ್ಲಿ 5937 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ.982.00 ಕೋಟಿ ಮೊತ್ತದ ಪಾವತಿಗಾಗಿ ಆದೇಶ ಹೊರಡಿಸಲಾಗಿದ್ದು, ಒಟ್ಟು ರೂ.134.44 ಕೋಟಿ ಮೊತ್ತದ ಕ್ಲೇಮ್ ಮೊತ್ತವನ್ನು 8812 ಕಾರ್ಮಿಕರಿಗೆ ವಿತರಿಸಿ ಪರಿಹಾರ ದೊರಕಿಸಿಕೊಡಲಾಗಿದೆ. ಉಳಿದ ಕ್ಲೇಮ್ ಅರ್ಜಿಗಳು ವಿಚಾರಣಾ ಹಂತದಲ್ಲಿದ್ದು, ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.

ಮುಂದುವರೆದು, ಸಕಾಲದಲ್ಲಿ ವೇತನ ಪಾವತಿಯಾಗದೇ ಇರುವ ಕುರಿತು ಸ್ವೀಕೃತವಾದ ಕ್ಲೇಮ್ ಅರ್ಜಿಗಳನ್ನು ವೇತನ ಪಾವತಿ ಕಾಯ್ದೆ, 1936ರಡಿ ಅಧಿಸೂಚಿಸಲ್ಪಟ್ಟ ನಿರೀಕ್ಷಕರು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸದರಿ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಕ್ಲೇಮ್ ಪ್ರಾಧಿಕಾರಿಗಳು ಸೆಕ್ಷನ್ 15 ರಡಿ ಸದರಿ ಕ್ಲೇಮ್ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ವಿಚಾರಣೆ ನಡೆಸಿ, ವೇತನದ ಜೊತೆಗೆ ಪರಿಹಾರವನ್ನು ಪಾವತಿಸಲು ಸಂಬಂಧಿಸಿದ ಗುತ್ತಿಗೆದಾರರು/ಸಂಸ್ಥೆಗಳ ವಿರುದ್ಧ ಆದೇಶಗಳನ್ನು ಹೊರಡಿಸುತ್ತಾರೆ ಹಾಗೂ ಕರ್ನಾಟಕ ವೇತನ ಪಾವತಿ ನಿಯಮಾವಳಿಯ ನಿಯಮ 20 ರನ್ವಯ ವೇತನ ಪಾವತಿಯನ್ನು ವಿಳಂಬಗೊಳಿಸಿದ ಹೊರಗುತ್ತಿಗೆ ಏಜೆನ್ಸಿ/ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವಕಾಶವಿದ್ದು, ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.

ವೇತನ ಪಾವತಿ ಕಾಯ್ದೆ, 1936ರಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 19,846 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.26.23 ಕೋಟಿ ಮೊತ್ತದ 2806 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಮುಂದೆ ದಾಖಲಿಸಲಾಗಿರುತ್ತದೆ ಹಾಗೂ ಸದರಿ ಪ್ರಾಧಿಕಾರಿಗಳು ಕ್ಲೇಮ್ ಅರ್ಜಿಗಳ ವಿಚಾರಣೆ ನಡೆಸಿ, ಕಳೆದ ಮೂರು ವರ್ಷಗಳಲ್ಲಿ **ರೂ. 83.31** ಕೋಟಿ ಮೊತ್ತಕ್ಕೆ ಆದೇಶ ಹೊರಡಿಸಿ, ಒಟ್ಟು 2073 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ.84.79 ಕೋಟಿಗಳನ್ನು ಒಟ್ಟು 4363 ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ.

| | | |
|---|---|---|
| | | ಬಾಕಿ ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ವಿಚಾರಣೆ ನಡೆಸಿ ಮುಂದಿನ ಕ್ರಮಕೈಗೊಳ್ಳಲಾಗುತ್ತಿದೆ. ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಈ) | ಕನಿಷ್ಠ ವೇತನ ಮತ್ತು PF/ESI ಮಾನ ದಂಡಗಳನ್ನು ಉಲ್ಲಂಘಿಸುವ ಉದ್ಯೋಗದಾತರ ವಿರುದ್ಧ ಸರ್ಕಾರ ಕ್ರಮಕೈಗೊಂಡಿದೆಯೇ? | ಕನಿಷ್ಠ ವೇತನ ಕಾಯ್ದೆ, 1948ರನ್ವಯ ಕನಿಷ್ಠ ವೇತನವನ್ನು ಪಾವತಿಸಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಉಲ್ಲಂಘಿಸುವ ಉದ್ಯೋಗದಾತರ ವಿರುದ್ಧ ಕಾಯ್ದೆ/ನಿಯಮಗಳನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಇ.ಎಸ್.ಐ. ಮತ್ತು ಇ.ಪಿ.ಎಫ್ ಇದು ರಾಜ್ಯ ಕಾರ್ಮಿಕ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡದೇ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವ ಎರಡು ಪ್ರತ್ಯೇಕ ಇಲಾಖೆಗಳಾಗಿದ್ದು, ಇ.ಎಸ್.ಐ.ಗೆ ಸಂಬಂಧಿಸಿದ ವಿಷಯವನ್ನು ಕಾರ್ಮಿಕ ರಾಜ್ಯ ವಿಮಾ ನಿಗಮ ಮತ್ತು ಇ.ಪಿ.ಎಫ್‌ಗೆ ಸಂಬಂಧಿಸಿದ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತಾಲಯಗಳು ಕ್ರಮವಾಗಿ ಜಾರಿ ಮತ್ತು ಅನುಷ್ಠಾನಗೊಳಿಸುತ್ತಿರುತ್ತದೆ.<br>ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು, ಬೆಂಗಳೂರು ವಲಯ., ಇವರು ನೀಡಿರುವ ಮಾಹಿತಿಯನ್ವಯ ಈ ಹಿಂದೆ, EPF&MP Act, 1952ರ ಅಡಿಯಲ್ಲಿ, PF ಮಾನದಂಡಗಳನ್ನು ಉಲ್ಲಂಘಿಸುವ ಉದ್ಯೋಗದಾತರ ವಿರುದ್ಧ, ತಪಾಸಣೆ, ಮೊಕದ್ದಮೆ ಹೂಡಿಕೆ ಮತ್ತು ಬಾಕಿಗಳ ಮೌಲ್ಯಮಾಪನ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿತ್ತು. ಪ್ರಸ್ತುತ ಕೇಂದ್ರ ಸರ್ಕಾರವು ದಿನಾಂಕ:21.11.2025ರಂದು ಸಾಮಾಜಿಕ ಭದ್ರತಾ ಸಂಹಿತೆಯನ್ನು ಹೊರಡಿಸಿರುತ್ತದೆ. ಸದರಿ ಸಂಹಿತೆಯ ಅಡಿಯಲ್ಲಿ ಆಕ್ಷೇಪಣೆ/ಸಲಹೆ ಆಹ್ವಾನಿಸಿ ಕರಡು ನಿಯಮಗಳನ್ನು ಹೊರಡಿಸಲಾಗಿರುತ್ತದೆ. ನಿಯಮಗಳು ಅಂತಿಮಗೊಂಡ ನಂತರ ಸದರಿ ನಿಯಮಗಳನ್ವಯ ಕ್ರಮ ಕೈಗೊಳ್ಳಲಾಗುತ್ತದೆ.<br>ಕಾರ್ಮಿಕ ರಾಜ್ಯ ವಿಮಾ ನಿಗಮ ಇವರು ನೀಡಿರುವ ಮಾಹಿತಿಯನ್ವಯ ESI ಮಾನದಂಡಗಳನ್ನು ಉಲ್ಲಂಘಿಸುವ ಉದ್ಯೋಗದಾತರ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: LD 133 LWA 2026**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

**ವಿಧಾನ ಪರಿಷತ್ತಿನ ಮಾನ್ಯಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1219 (1092)ಕ್ಕೆ**

## ಅನುಬಂಧ-1

### ಕಳೆದಮೂರುವರ್ಷದಲ್ಲಿಕನಿಷ್ಠವೇತನಕಾಯ್ದೆ, 1948ರಡಿದಾಖಲಾದಕ್ಲೇಮ್ಅರ್ಜಿಗಳವಿವರ

| ಕ್ರ. ಸಂ. | ವರ್ಷ | ಕನಿಷ್ಠ ವೇತನ ಕಾಯ್ದೆಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ (ರೂ.ಗಳಲ್ಲಿ) | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ.ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|---|
| 1 | 2023-24 | 5250 | 915 | 6165 | 12877 | 625,308,615.80 | 2658 | 3507 | 514,774,318.56 | 40,100,139.58 | 2805 |
| 2 | 2024-25 | 3507 | 1289 | 4796 | 9730 | 414,660,416.00 | 2233 | 2563 | 178,056,861.80 | 57,196,931.26 | 3204 |
| 3 | 2025-26 (ಫೆಬ್ರುವರಿ 2026ರ ಅಂತ್ಯಕ್ಕೆ) | 2563 | 1396 | 3959 | 19388 | 425,504,615.96 | 1046 | 2913 | 289,267,413.00 | 37,145,523.96 | 2803 |
| | **ಒಟ್ಟು** | **5250** | **3600** | **8850** | **41995** | **1,465,473,647.76** | **5937** | **2913** | **982,098,593.36** | **134,442,594.80** | **8812** |

**ವಿಧಾನ ಪರಿಷತ್ತಿನ ಮಾನ್ಯಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1219 (1092)ಕ್ಕೆ**

## ಅನುಬಂಧ-2

## ಕಳೆದಮೂರುವರ್ಷದಲ್ಲಿವೇತನಪಾವತಿಕಾಯ್ದೆ, 1936ರಡಿದಾಖಲಾದಕ್ಲೇಮ್ಅರ್ಜಿಗಳವಿವರ

| ಕ್ರ. ಸಂ. | ವರ್ಷ | ವೇತನ ಪಾವತಿ ಕಾಯ್ದೆಯಡಿ ವರ್ಷದ ಪ್ರಾರಂಭದಲ್ಲಿದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ (ರೂ.ಗಳಲ್ಲಿ) | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ವಿತರಿಸಲಾದ ಒಟ್ಟು ಮೊತ್ತ (ರೂ.ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|---|
| 1 | 2023-24 | 1405 | 415 | 1820 | 7334 | 550,698,417.00 | 965 | 855 | 264,088,197.00 | 20,367,749.00 | 1402 |
| 2 | 2024-25 | 855 | 557 | 1412 | 6270 | 1,534,413,269.00 | 693 | 719 | 417,429,811.00 | 28,551,290.00 | 1612 |
| 3 | 2025-26 (ಫೆಬ್ರವರಿ 2026ರ ಅಂತ್ಯಕ್ಕೆ) | 719 | 429 | 1148 | 6242 | 538,666,672.00 | 415 | 733 | 151,594,867.00 | 35,869,611.00 | 1349 |
| ಒಟ್ಟು | | **1405** | **1401** | **2806** | **19846** | **2,623,778,358.00** | **2073** | **733** | **833,112,875.00** | **84,788,650.00** | **4363** |